(ಸಾಕ್ಷಿಗೆ ದಿನಾಂಕ: 21.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆಃ ಶ್ರೀ ಬಿ.ಜಿ.ಆರ್., ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ಅಂಶಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಇದನ್ನು ನಾನೇ ಹೇಳಿ ಬರೆಯಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ.

ನಿ.ಪಿ.1 ದಾಖಲೆಯನ್ನು ನಾನು ಈಗ ನೋಡುತ್ತಿದ್ದೇನೆ. ನಿ.ಪಿ.1 ದಾಖಲೆಯನ್ನು ಪ್ರತಿವಾದಿಯರು ವಾದಿಗೆ ಬರೆದುಕೊಟ್ಟಿರುತ್ತಾರೆ. ನಿ.ಪಿ.1 ದಾಖಲೆಗೆ ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಎ) ರಿಂದ ನಿ.ಪಿ.1(ಇ) ಎಂದು ಗುರುತಿಸಲಾಗಿರುತ್ತದೆ.

ನಿ.ಪಿ.1 ದಾಖಲೆಗೆ ಸಾಕ್ಷಿದಾರರಾಗಿ ಲೋಕೇಶ್ ಮತ್ತು ಚರಣ್ ಸಹಿ ಮಾಡಿರುತ್ತಾರೆ. ನಿ.ಪಿ.1 ದಾಖಲೆಯಲ್ಲಿರುವ ಸದರಿ ಸಹಿಗಳನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಗಳನ್ನು ಈಗಾಗಲೇ ಅನುಕ್ರಮವಾಗಿ ನಿ.ಪಿ.1(ಎಫ್) ಮತ್ತು ನಿ.ಪಿ.1(ಜಿ) ಎಂದು ಗುರುತಿಸಲಾಗಿರುತ್ತದೆ.

ನಿ.ಪಿ.1 ದಾಖಲೆಯನ್ನು ನಾನು ತಯಾರಿಸಿರುತ್ತೇನೆ. ಸದರಿ ದಾಖಲೆಯಲ್ಲಿರುವ ನನ್ನ ಸಹಿಯನ್ನು ನಾನು ಈಗ ನೋಡುತ್ತಿದ್ದೇನೆ. ಸಾಕ್ಷಿ ನೋಡಿ ಗುರುತಿಸಿದ ಸದರಿ ಸಹಿಯನ್ನು ಈಗಾಗಲೇ ನಿ.ಪಿ.1(ಹೆಚ್) ಎಂದು ಗುರುತಿಸಲಾಗಿರುತ್ತದೆ.

ದಿನಾಂಕಃ 12.12.2018ರಂದು 1 ರಿಂದ 4ನೇ ಪ್ರತಿವಾದಿಗಳು ವಾದಿಗೆ ಒಂದು ಮುಂದುವರೆದ ನೋಂದಣಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದು ಅದನ್ನು ಈಗ ನೋಡುತ್ತಿದ್ದು ನಿ.ಪಿ.2 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ 1 ರಿಂದ 4ನೇ ಪ್ರತಿವಾದಿಗಳು ಎಲ್ಲಾ ಪುಟಗಳಿಗೂ ಸಹಿ ಮಾಡಿರುತ್ತಾರೆ. ಕಡೆಯ ಪುಟದಲ್ಲಿರುವ ವಾದಿಯ ಸಹಿಯನ್ನು ಈಗ ನೋಡುತ್ತಿದ್ದು ಈಗಾಗಲೇ ನಿ.ಪಿ.2(ಎ) ಎಂದು, ಕಡೆಯ ಪುಟದಲ್ಲಿರುವ 1 ರಿಂದ 4ನೇ ಪ್ರತಿವಾದಿಗಳ ಸಹಿಗಳನ್ನು ಈಗ ನೋಡುತ್ತಿದ್ದು ಈಗಾಗಲೇ ನಿ.ಪಿ.2(ಬಿ) ಇಂದ 2(ಇ) ಎಂದು ಗುರುತಿಸಲಾಗಿರುತ್ತದೆ.

ಸದರಿ ದಾಖಲೆಗೆ ರಾಮಕೃಷ್ಣ ಮತ್ತು ಪ್ರಕಾಶ್ ಎಂಬುವವರು ಸಾಕ್ಷಿ ಸಹಿ ಮಾಡಿದ್ದು ಸದರಿ ಸಹಿಗಳನ್ನು ಈಗ ನೋಡುತ್ತಿದ್ದು ಈಗಾಗಲೇ ನಿ.ಪಿ.2(ಎಫ್) ಮತ್ತು 2(ಜಿ) ಎಂದು ಗುರುತಿಸಲಾಗಿರುತ್ತದೆ. ಸದರಿ ದಾಖಲೆಗೆ ನಾನು ಬಿಕ್ಲಮ್ ಸಹಿ ಮಾಡಿದ್ದು ಸದರಿ ಸಹಿಯನ್ನು ಈಗ

ನೋಡುತ್ತಿದ್ದು ಈಗಾಗಲೇ ನಿ.ಪಿ.2(ಹೆಚ್) ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಶ್ರೀ ಸಿ.ಎಸ್.ಸಿ., ಪ್ರತಿವಾದಿಗಳ ಪರ ವಕೀಲರಿಂದಃ**

ಪ್ರತಿವಾದಿಯರು ಹಾಗೂ ಪ್ರತಿವಾದಿಯರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.